ಮುತುವರ್ಜಿ ವಹಿಸಿದನು. ಆಸ್ಪತ್ರೆಗೆ ಸೇರಿಸಲು ಆಂಬುಲೆನ್ಸ್ ಕರೆಯಲು ಸುದ್ದಿ ಕೊಟ್ಟನು. ಮಲ್ಲನನ್ನು ಎತ್ತಾಡಿ ಎತ್ತಾಡಿ ದೇಹ ಬಾಡಿದ ದಂಟಿನಂತಾಗಿ ಕತ್ತು ಅತ್ತಿತ್ತ ವಾಲುತ್ತಿತ್ತು. ಮಲ್ಲನ ಸ್ಥಿತಿಯನ್ನು ನೋಡಿ ಕೈ ಹಾಕಿ ಕತ್ತು ಮುರಿಯದಂತೆ ನಂಜಣ್ಣ ಹಿಡಿದು ನಿಂತಿದ್ದ. ತುಂಬಾ ಹೊತ್ತು ಹೀಗೇ ಹಿಡಿದು ನಿಂತ ನಂಜಣ್ಣ ಸುಸ್ತಾಗಿ ಮಲ್ಲನನ್ನು ಹಿಡಿಯುವಂತೆ ಅಲ್ಲೇ ನಿಂತಿದ್ದವರಿಗೆ ಹೇಳಿದ. ಊರ ಹುಡುಗರು ಎಲ್ಲ ಸೇರಿ ದೇಹವನ್ನು ಅವರವರ ಕಾಲು ಮಂಡಿಗೆ ವರಗಿಸಿ ಕೂರಿಸಿಕೊಂಡರು. ಊರ ಜನರಿಗೆ ಕಷ್ಟದ ಸಮಯದಲ್ಲಿ ಹಗೆ ನೆನಪಿಗೆ ಬರಲೇ ಇಲ್ಲ. ಊರಲ್ಲಿ ಅವರವರ ಬದುಕು ಅವರವರಿಗೆ ದೊಡ್ಡದು. ಯಾರ ಮೇಲೂ ಯಾರಿಗೂ ಹಗೆ ಇರಲಿಲ್ಲ. ಆಂಬುಲೆನ್ಸ್ ಬರುವವರೆಗೂ ಕಾಯ್ದರು. ಮುಂಚಿನ ಹಾಗೆ ಹತ್ತಾರು ಫರ್ಲಾಂಗು ಸುತ್ತಿ ಬರಬೇಕಿರಲಿಲ್ಲ. ಕಣಿವೆ ಬಗೆದು ದಾರಿ ಮಾಡಿದ್ದರು. ಹಾಗಾಗಿ ಬಂದ ಆಂಬುಲೆನ್ಸ್ ತಕ್ಷಣ ಕೂರಿಸಿಕೊಂಡು ಹೊರಟೇ ಬಿಟ್ಟಿತು. ಅಲ್ಲಲ್ಲಿ ಗುಂಪು ಕಟ್ಟಿ ಮಾತನಾಡುತ್ತಿದ್ದದ್ದು ಸಾಮಾನ್ಯವಾಗಿತ್ತು.

ಮಲೆಯಮ್ಮ ಬಸವನ ಮೈ ಸವರುತ್ತಾ ಇದ್ದಂತೆ ಬಸವ ಮಲೆಯಮ್ಮನತ್ತ ತಿರುಗಿ ಮೈ ಮೂಸಿತು. ಬಸವ ಯಾವ ಅಪಾಯವನ್ನೂ ಮಾಡದೆ ಅತ್ತ ಹೋಗಿದ್ದು ದೇವರ ದಯೆ ಎಂತಲೂ, ಆ ಅಪಾಯ ಈ ರೂಪದಲ್ಲಿ ಇತ್ತ ತಿರುಗಿದ್ದು ಮಲ್ಲನ ಗ್ರಹಚಾರ ಎಂತಲೂ ಮಾತು ಹರಿದಾಡುತ್ತಿತ್ತು.

ಇಡೀ ಊರಿಗೆ ಅವತ್ತು ಹಗಲು ರಾತ್ರಿಯ ವ್ಯತ್ಯಾಸವೇ ಇರಲಿಲ್ಲ. ಮಲ್ಲನನ್ನು ಆಸ್ಪತ್ರೆಗೆ ಅತ್ತ ಕಳುಹಿಸಿದರೂ ಜನ ಇನ್ನೂ ಏನೇನೋ ಮಾತನಾಡುತ್ತಾ ಆಸ್ಪತ್ರೆಗೆ ಹೋದವರು ಏನು ಸುದ್ದಿ ತರಬಹುದು ಎಂಬ ಆತಂಕದಿಂದ ಕಾಯುತ್ತಿದ್ದರು.

* * *

ಕಟ್ಟೆ ಒಳಗೆ ನಳ್ಳಿ ಹಿಡಿಯೋಕೆ ಬಿಲಗಳಿಗೆ ಬಾಲ ಇಟ್ಟುಕೊಂಡು ಕುಂತ ನರಿಗೆ ಎಷ್ಟೊತ್ತಾದರೂ ಒಂದು ನಳ್ಳಿಯೂ ಸಿಗದೆ ಬೇಸರವಾಯಿತು. ಆ ಚಳಿಗೆ ಬೀಡಿ ಬೇಕೆನಿಸಿತು. 'ಥೂ ಇದ್ರವ್ವನ್ ಹೋಗತ್ತ' ಅಂದ್ಕಂಡು ಈ ದಾರೀಲಿ ಯಾರಾದರೂ ಸಿಕ್ಕಿದ್ರೆ ಮೈ ಬೆಚ್ಚಗೆ ಮಾಡ್ಕಳಣ ಅಂತ ಇತ್ತ ಏರಿಯ ಮ್ಯಾಕೆ ಬಂತು. ಏರಿಯ ಮ್ಯಾಕೆ ಬಂದ ನರಿ ಅತ್ತಗಿತ್ತಗೆ ಒಂದು ಸಾರಿ ನೋಡ್ತು. ಯಾರೂ ಅಲ್ಲಿಗೆ ಬರುತ್ತಿರುವ ಸುಳಿವು ಸಿಗದಿದ್ದಾಗ 'ಈಗ ಹಿಂದಿನಂಗಲ್ಲ, ಹಿಂದೆ ತೋಟ ಕಾಯಕ್ಕೆ ಅಂತ ಮಲ್ಲನ ಬಿಟ್ಟು ಹೋಗೋಕೆ ಬತ್ತಿದ್ನಲ್ಲ ಸಿದ್ದಣ್ಣ ಆಗ ಒಂದು ಬೀಡಿ ಅಂದ್ರೆ, ಕಟ್‌ಕಟ್ಟೇ ಕೊಟ್ಟೋಕ್ತಿದ್ದ. ಅವನು ಹೋದ ಮೇಲೆ ಬೀಡಿ ಮುಖ ನೋಡೋದೇ ಕಷ್ಟ ಆಗೋಯ್ತು. ಈಗ ಯಾರ್ನಾರ ಬೀಡಿ ಕೇಳಿದ್ರೂ ಬೋಳಿ ಮಕ್ಳು ಕಲ್ಲೆತ್ಕಂಡೇ ಬತ್ತವೆ' ಅಂದ್ಕಂಡು ಅಲ್ಲೇ ಕೂತಿತ್ತು.

ಅದೇನೋ ಕಿವಿಗೆ ಶಬ್ದ ಕೇಳಿದಂತಾಗಿ ಅತ್ತಿತ್ತ ತಲೆಯಾಡಿಸಿ ಕಿವಿಯಾಲೆಗಳನ್ನು ನೆಟ್ಟಗೆ ಮಾಡಿ ನಾಲ್ಕೆಜ್ಜೆ ಮುಂದಕ್ಕೆ ಬಂತು. 'ಥೂ ಇವನ್ ಹೆತ್ತೋಳ್... ಹಾಳಾದ ಸೊಳ್ಳೆ' ಎಂದು ಕಾಲಲ್ಲಿ ಸೊಳ್ಳೆ ಓಡಿಸ್ಕಂಡು ಅಲ್ಲೇ ಕೂರ್ತು.

ಬರುಬರುತ್ತಾ ಚಳಿ ಜಾಸ್ತಿಯಾಗಿ ಅತ್ತ ಊರ್ಕಡಿಕೋದ್ರೆ ಪುಂಡೈಕ್ಳು ದೊಡ್ಡವರ ಕಂಡು ಹೆದರಿ ಸೇದುತ್ತಿದ್ದ ಬೀಡಿನ ಬಿಸಾಕಿರ್ತವೆ. ಅದೇನಾದ್ರೂ ತುಂಡು ಸಿಕ್ಕಿದ್ರೆ ಮೈ ಬೆಚ್ಚಗೆ ಮಾಡ್ಕಳನ ಅನ್ಕಂಡು ಊರ್ಕಡಿಕೆ ಹೊರಡ್ತು. ಇದು ಹೋಗ್ತಾ ಇರೋದ್ನ ಬಿಲ್ಲೆ ಹಾಕ್ಕಂಡು ಬಸಪ್ಪನ ಮನೆ ಕಾಯ್ತಾ ಮಲಗಿದ್ದ ನಾಯಿ ನೋಡಿ 'ಬೌ' ಅಂತು. ಚಕ್ಕನೆ ನಿಂತ ನರಿ 'ಥೂ ಇದರ್ ಸೆಲ್ಗೆಟ್ಟೋಗ, ಬೌ ಅಂದಲೆ ಏನ್ ಮಾಡುತ್ತೆ, ನನ್ನಂಗೆ ಸುತ್ತಾಡಿ ಅನ್ನ ಹುಟ್ಟುಸ್ಕಂಡು ತಿಂದಿದ್ರೆ ಗೊತ್ತಾಗ್ತಿತ್ತು. ಯಾವನ್ ಮನೇಲೊ ಎಸೆದಿದ್ದ ತಿಂದು ಸಿಕ್ಕಿದ್ದೊಂದು ತುಂಡ್ ಜಾಗ್ದಲ್ಲಿ ಮಲಿಕಂಡಂಗಲ್ಲ, ಬೋಳಿ ಮಗಂದು' ಅಂತ ಬೈದು 'ಅದರ ಕಣ್ಣಿಗೆ ಬಿದ್ರಲ್ವ ಬೌ ಅನ್ನದು' ಎಂದು ಗೊಣಗಿಕೊಂಡ ನರಿ ಆ ಬೇಲಿ, ಈ ಬೇಲಿ ಮರೆಯಲ್ಲಿ, ಬೆಳಕಿಲ್ಲದ ಹಾದಿಯಲ್ಲಿ ಹೊರಟು ಊರ ಮುಂದಿನ ಗೋಣಿ ಮರದ ಬುಡಕ್ಕೆ ಬಂತು.

ಆ ಸರಿ ರಾತ್ರೀಲಿ ಗೋಣಿಮರ, ಆ ಗೋರ್ಕಲ್ಲು, ಮಲ್ಲನ ಗಾಡಿಯ ಕಡಾಣಿ ಈ ಮೂರೂ ಕುಂತು ಮಾತನಾಡಿಕೊಳ್ಳುತ್ತಿದ್ದವು. ತಕ್ಷಣ ನರಿ ಮುಖ ಕಂಡು 'ಏನ್ ನರಿಯಣ್ಣ ಇವತ್ತು ಇತ್ತ ಮುಖ ಮಾಡಿದ್ದೀಯ, ಎಷ್ಟು ವರ್ಷ ಆಯ್ತು ನಿನ್ನ ನೋಡಿ, ಯಾರಿಗೋ ಅದೃಷ್ಟ ಕುಲಾಯಿಸ್ತು ಅಂತ ಕಾಣುತ್ತೆ ಕಣಪ್ಪೋ' ಅಂತ ಕಡಾಣಿ ಕೇಳಿತು.

ಆ ಕತ್ಲೆಲ್ಲಿ ನರಿಯಣ್ಣನಿಗೆ ದನಿ ಕೇಳಿತಾದರೂ ಆ ಕಪ್ಪು ಕತ್ತಲೆಯೊಳಗೆ ಕಪ್ಪಾದ ಕಡಾಣಿಯ ಕಾಣದೆ ನರಿಗೆ ತಕ್ಷಣಕ್ಕೆ ಗುರುತು ಸಿಗಲಿಲ್ಲ. ಅದನ್ನರಿತ ಕಡಾಣಿ 'ಏನ್ ನರಿಯಣ್ಣ ನನ್ನ ಮರೆತುಬಿಟ್ಯಾ? ಆಗಾಗ ಸಿದ್ದುಂತಾವ ನೀನು ಬೀಡಿ ಈಸ್ಕಂತಿದ್ದದ್ದು?' ಎಂದು ಹಳೆಯದನ್ನು ನೆನಪು ಮಾಡಿದಾಗ ನರಿಗೊಂಥರಾ ಅನ್ನಿಸಿ, ಕಣ್ಣರಳಿಸಿ 'ಅಯ್ಯೋ ಏನು ನೀನು ಇಲ್ಲಿ? ಏನೂ ಅಂತ್ಕಬೇಡ ಕಡಾಣಪ್ಪ' ಎಂದಿತು ನರಿ. ಅದಕ್ಕೆ ಕಡಾಣಿ 'ಅಯ್ಯೋ ನಿನಗೆ ನಾನೆಲ್ಲಿ ಗುರ್ತಾದೇನು? ಅದ್ಕೇ ನಾನೇ ಮಾತಾಡ್ದೆ' ಅಂತು.

ಈ ಮಧ್ಯ ಗೋರ್ಕಲ್ಲು ಚಳಿ ಜ್ವರ ಬಂದು ನಡುಗ್ತಿತ್ತು. ಅತ್ಲಾಗಿ ಮಾತಾಡ್ತಿದ್ದ ನರಿಯಣ್ಣ ಇತ್ಲಾಗಿ ತಿರುಗಿ ಓಡಿ ಬಂದು ಏನಾಯ್ತು ಎಂದು ಗೋರ್ಕಲ್ಲ ಮೈ ಮುಟ್ಟಿ 'ಅಯ್ಯೋ ಏನು ಇಂಗೆ ಬೆಂದೋಕ್ತಿದ್ದೀಯ' ಎಂದಿತು. ನಡುಗುತ್ತಲೇ ಗೋರ್ಕಲ್ಲು, 'ಈ ಹಟ್ಟಿ ಐಕ್ಳು ಮಕ್ಳು ಬೆಂಕಿ ಹತ್ತುಸ್ತೀವಿ ಅಂತ ಕಲ್ ತಗಂಡು ಕುಟ್ಟಿ ಕುಟ್ಟಿ ನನ್ನ ಮೈ ಎಲ್ಲಾ ಗಾಯ ಮಾಡವೆ' ಎಂದು ಹೇಳುತ್ತಿರುವಾಗಲೇ ಗಂಟಲಲ್ಲಿ ಉಸಿರು ಸಿಕ್ಕಂಡಂಗಾಗಿ ಮಾತು ನಿಲ್ಲಿಸಿತು. ಗಾಬರಿಯಾದ ನರಿಯಣ್ಣ ಗೋರ್ಕಲ್ಲ ಗಂಟ್ಲನ್ನ ನೀವಿ ಸರಿ ಮಾಡಿ 'ಯಾಕೆ ಏನಾಯ್ತು' ಎಂದು ಕೇಳಿತು. ಇಷ್ಟು ವಾತ್ಸಲ್ಯದಿಂದ ತನ್ನ ಅಳಲನ್ನು ಯಾರೂ ಕೇಳಲಿಲ್ಲವಲ್ಲಾ ಎಂದು ನೆನೆದು ಎರಡನಿ ಕಣ್ಣೀರು ಹಾಕಿತು.

'ಅಯ್ಯೋ ಸುಮ್ನಿರು, ಕಷ್ಟ ಅನ್ನದು ಯಾರಿಗೆ ತಪ್ಪೀತು?' ಎಂದ ಗೋರ್ಕಲ್ಲು ಕಣ್ಣು ಒರೆಸಿಕೊಳ್ಳುತ್ತಾ, 'ವತಾರೆ ಆ ಮೂರ್ತಿ ಹುಡುಗ ಜೋರ್ ಬೆಂಕಿ ಬರುಸ್ತೀನಿ ಅಂತ ದಪ್ಪದೊಂದು ಕಲ್ಡುಂಡ ತಲೆಮೇಲೆ ಹೊತ್ಕಂಡು ಬಂತು. ಅದು ಬರೋದ ನೋಡಿ ನನ್ನ ಜಂಘಾಬಲವೇ ಉಡುಗಿಹೋಯಿತು. ಅಯ್ಯೋ ಶಿವನೇ ಇವತ್ತು ನನ್ನ ಎರಡೋಳು ಮಾಡಿ ತೀರ್ಸೇ ಬಿಡ್ತಾನೆ' ಅಂತ ನಿಶ್ಚಯಿಸಿಕೊಂಡಿದ್ದೆ. ಅಷ್ಟು ಹೊತ್ತಿಗೆ ಅದ್ಯಾರೋ ಬುಡ್ಡಯ್ಯನ ಮನೆಗೆ ಬಂದವರು ಊರಿಗೆ ಹೊಸಬರು: 'ಲೇ ಲೇ ಲೇ ಲೇ' ಅಂತ ಕೂಗಿ 'ಕಣ್ಣಿಗೆ ಗೋರಿ ಸಿಡಿಸ್ಕಂತಿಯ, ಅದರ ಮೇಲೆ ಹಾಕಬೇಡ' ಅಂತ ಅವನ ತಲೆ ಮೇಲಿದ್ದ ಕಲ್ಲ ಅತ್ಲಾಗೆ ಎಸಿಸ್ದ ಪುಣ್ಯಾತ್ಮ. 'ಅದನ್ನ ನೆನೆಸ್ಕೊಂಡ್ರೆ ಈಗ್ಲೂ ಮೈ ನಡುಗುತ್ತೆ' ಅಂತ ತನ್ನ ಅಳಲನ್ನು ತೋಡಿಕೊಂಡಿತು.

ಈ ಜನ ತಮ್ಮಮ್ಮ ದಡ್ಡತನವನ್ನು ಮರೆಮಾಚಿ, ಮತ್ಯಾರನ್ನೋ ಬೊಟ್ಟುಮಾಡಿ ತೋರಿಸಲು ನನ್ನನ್ನು ಉದಾಹರಣೆಯಾಗಿ ತೆಗೆದ್ಕೊಂಡು 'ಗೋರ್ಕಲ್ಲ ಮೇಲೆ ಮಳೆಗರೆದಂತೆ' ಎಂದು ಗಾದಿ ಬೇರೆ ಹುಟ್ಟಾಕಂಡವರೆ... ಇದು ಸರೀನ ನರಿಯಣ್ಣ? ಇವರಿಗೆ ಉಪಯೋಗಕ್ಕೆ ಬರದಾದ್ರೆ ತುಂಡ್ ತುಂಡ್ ಮಾಡಿ ತಳಾದಿಗೆ ಹಾಕಂತಾರೆ, ಸಾರು ರುಚಿ ಬರಲಿ ಎಂದು ಕಾದೆಣ್ಣೆಲ್ಲಿ ಉರುಳ್ಸಿ ಉರುಳ್ಸಿ ಎತ್ತಿ ಕುದಿಯೋ ಸಾರ್ಗೆ ಹಾಕ್ತಾರೆ. ನನ್ನ ಗಾತ್ರ ಜಾಸ್ತಿ ಇದ್ರೆ ಹರಿಯೋ ನೀರಿಗೆ ಒಡ್ಡು ಹಾಕ್ತಾರೆ. ಇವರ ಉಪಯೋಗಕ್ಕೆ ಬರಲ್ಲ ಅಂದ್ರೆ ಹಿಂಗೇ ಮರದ ಬುಡಕ್ಕೋ, ಹಳ್ಳದ ಸಾಲಿಗೋ ಉರುಳುಸ್ತಾರೆ. ಒಂದು ಕಾಲ್ದಲ್ಲಿ ನನ್ನಿಂದ ಬೆಳಕು ಕಂಡವರು, ಇವತ್ತು ಅದುನ್ನೆಲ್ಲ ಮರ್ತು ಹೀಗೆ ಮಾಡ್ಬೌದ ನರಿಯಣ್ಣ?' ಅಂತ ಬೇಸರಿಸಿತು.

ನರಿ ಬಂದಿದ್ದರಿಂದ ತನ್ನ ತವರೇ ಬಂದಂತೆ ಕಡಾಣಿ ಲವಲವಿಕೆಯಿಂದ ಇತ್ತು. ಹೀಗೆ ಮಾತನಾಡುತ್ತಿದ್ದಾಗ ಬೆಳ್ಳಿಲಿ ಓಡಿ ಹೋಗಿ ಆ ಗೋಣಿ ಮರದ ಪೊಟರೆಯೊಳಗೆ ಮುಚ್ಚಾಕಿಕೊಂಡ್ತು. ಆ ರಾತ್ರಿ ನಳ್ಳಿ ಸಿಗದೆ ಹಸ್ಕೊಂಡಿದ್ದ ನರಿ ಛಂಗನೆ ಆ ಮರಕ್ಕೆ ಎಗರಿತು. ಆ ಬಿಲಕ್ಕೆ ಮೂತಿ ಇಕ್ಕಿ ಮೂಸಿತು. ಗೋಣಿ ಮರ ಅಯ್ಯೋ ಅಂತು. ನರಿ ಆ ಶಬ್ದಕ್ಕೆ ಹೆದರಿ ಕೆಳಗೆ ಜಿಗಿದು 'ಅಯ್ಯೋ ಸಾರಿ... ಏನಾಯ್ತು?' ಎಂದು ಗೋಣಿಮರವ ಕೇಳಿತು. 'ಅಯ್ಯೋ ಆ ಮಲ್ಲನ ಗಾಡಿ ಒಂದೇ ನಗಾಲೆ ಓಡಿ ಬಂದದ್ದು ಬಂದಂತೆ ನನ್ನ ಬುಡಕ್ಕೆ ಬಂದು ಗುದ್ದಿಬುಡ್ತು. ಆವತ್ತು ನಾನು ಬುಡಸಮೇತ ನಡುಗಿದ್ದೆ. ಅಯ್ಯೋ ನನ್ನ ಸೊಂಟದ ಕತೆ ಮುಗಿತು ಅಂದುಕೊಂಡೆ. ನಡ ಹಿಡ್ಕಂಡು ಕಿತ್ತೋದ ಗಾಯ, ಗೀರಿದ ಗುರುತು ನರಿಯಣ್ಣನಿಗೆ ತೋರಿಸಿತು. ಪಾರಿ ಮುರಿದು, ಗಾಡಿ ಬಿದ್ದು, ಕಡಾಣಿ ಕಳಚಿ, ಚಕ್ರ ಉರುಳಿ ಬಿತ್ತು. ಮಲ್ಲುನ್ನೆತ್ತೋಕೆ ಬಂದವರು ಗಾಡಿ ಚಕ್ರ, ಮೂಕು, ಈಚು, ಪಾರಿ, ನೊಗ, ಎತ್ತಿನಗ್ಗ ಸಮೇತ ಎತ್ಕಂಡೋದವ್ರು ಈ ಕಡಾಣಿಯ ಮರೆತು ಬಿಟ್ಟುಹೋದ್ರು. ಇದು ಯಾರ ಕಣ್ಣಿಗೂ ಬೀಳ್ಳಿಲ್ಲ. ಪಾಪ ಈ ಕಡಾಣಿ ಸಂಕಟ ನಾನ್ಯಾವ ಬಾಯಿಂದ ಹೇಳಲಿ' ಎಂದು ಕಡಾಣಿಯ ಸ್ಥಿತಿ ನೋಡಿ ಮರುಕ ಪಟ್ಟಿತು.

ಆ ಮಾತಿಗೆ ಕಿವಿಯಾದ ನರಿ 'ಅದೇನೇಳಿ ನಾನೂ